PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE: 25/3/21

# ಗದ್ದಲದಲ್ಲೇ ಧನವಿನಿಯೋಗ ಮಸೂದೆ ಅಂಗೀಕಾರ

## ಸಿ. ಡಿ. ಚರ್ಚೆಗೆ ಅವಕಾಶ ನೀಡುವಂತೆ ಕಾಂಗ್ರೆಸ್ ಸದಸ್ಯರಿಂದ ಸದನದ ಬಾವಿಗಿಳಿದು ಪ್ರತಿಭಟನೆ

**ವಿಧಾನ ಪರಿಷತ್:** ಸಿಡಿ ಪ್ರಕರಣಕ್ಕೆ ಸಂಬಂಧಿಸಿದಂತೆ ಚರ್ಚೆಗೆ ಅವಕಾಶ ನೀಡಬೇಕು ಎಂದು ಆಗ್ರಹಿಸಿ ಕಾಂಗ್ರೆಸ್ ಸದಸ್ಯರು ಸದನದ ಬಾವಿಗಿಳಿದು ಪ್ರತಿಭಟನೆ ಆರಂಭಿಸುತ್ತಿದ್ದಂತೆ ಜೆಡಿಎಸ್ ಸದಸ್ಯರು ಸಭಾತ್ಯಾಗ ಮಾಡಿದರು. ಕಾಂಗ್ರೆಸ್ ಸದಸ್ಯರ ಗದ್ದಲದ ನಡುವೆಯೇ ಸಿಎಂ ಯಡಿಯೂರಪ್ಪ ಅವರು 2021-22ನೇ ಸಾಲಿನ ಬಜೆಟ್ ಮಂಡಿಸಿ, ಅನುಮೋದನೆ ಪಡೆದರು.

ಬುಧವಾರ ಬೆಳಗ್ಗಿನ ಕಲಾಪದ ವೇಳೆ ಪ್ರಶ್ನೋತ್ತರ ಮುಗಿಯುತ್ತಿದ್ದಂತೆ ವಿರೋಧ ಪಕ್ಷದ ನಾಯಕ ಎಸ್.ಆರ್ .ಪಾಟೀಲ್ ಅವರು ಸಿಡಿ ಪ್ರಕರಣ ಪ್ರಸ್ತಾವಿಸಲು ಮತ್ತು ಅದರ ಮೇಲೆ ಚರ್ಚೆಗೆ ಅವಕಾಶ ನೀಡಬೇಕು ಎಂದು ಕೋರಿದರು. ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ಈ ವಿಷಯ ಕಲಾಪಟ್ಟಿಯಲ್ಲಿದ್ದು ಕಾಲಾವಕಾಶ ಒದಗಿಬಂದಾಗ ನೀಡಲಾಗುತ್ತದೆ ಎಂದು ಹೇಳಿದರು. ಆಗ ಕಾಂಗ್ರೆಸ್ ಸದಸ್ಯರು ಸಿಡಿ ಪ್ರಕರಣದ ಚರ್ಚೆಗೆ ಅವಕಾಶ ನೀಡಲೇ ಬೇಕು ಎಂದು ಆಗ್ರಹಿಸಿ, ಸದನದ ಬಾವಿಗಿಳಿದು ಪ್ರತಿಭಟನೆ ಆರಂಭಿಸಿದರು. ಈ ವೇಳೆ ಜೆಡಿಎಸ್ ಸದಸ್ಯರು ಸಭಾ ತ್ಯಾಗ ಮಾಡುತ್ತಿದ್ದಂತೆ ಸಭಾಪತಿಯವರು ಸದನವನ್ನು 10 ನಿಮಿಷ ಮುಂದೂಡಿದರು.

**ಆರು ಮಸೂದೆ ಅಂಗೀಕಾರ:** ಕಲಾಪ ಪುನಃ ಆರಂಭವಾಗುತ್ತಿದ್ದಂತೆ ಸದನದಲ್ಲಿದ್ದ ಮುಖ್ಯಮಂತ್ರಿಗಳು ಸಭಾಪತಿಯರ ಸೂಚನೆ ಮೇರೆಗೆ 2021-22ನೇ ಸಾಲಿನ ವೆಚ್ಚಕ್ಕಾಗಿ ಅನುದಾನಗಳನ್ನು ಪಡೆಯಲು ಬೇಡಿಕೆಗಳ ಸೂಚನೆ, ಕರ್ನಾಟಕ ಧನವಿನಿಯೋಗ ವಿಧೇಯಕ-2021, ಕರ್ನಾಟಕ ಧನವಿನಿಯೋಗ(ಸಂಖ್ಯೆ2) ವಿಧೇಯಕ-2021, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ(ತಿದ್ದುಪಡಿ) ವಿಧೇಯಕ-2021 ಮಂಡಿಸಿ ಗದ್ದಲದ ನಡುವೆಯೇ ಧ್ವನಿಮತದ ಮೂಲಕ ಅಂಗೀಕಾರ ಪಡೆದರು.

ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿಯವರು ಕರ್ನಾಟಕ ಸೊಸೈಟಿ ನೋಂದಣಿ (ತಿದ್ದುಪಡಿ) ವಿಧೇಯಕ-2021 ಮಂಡಿಸಿದರು. ಮೀನುಗಾರಿಕೆ ಸಚಿವ ಎಸ್.ಅಂಗಾರ ಅವರು ಕರ್ನಾಟಕ ಜಲಸಾರಿಗೆ ಮಂಡಳಿ (ತಿದ್ದುಪಡಿ) ವಿಧೇಯಕ-2021 ಮಂಡಿಸಿದರು. ಈ ಎರಡು ವಿಧೇಯಕವನ್ನು ಸದನ ಗದ್ದಲದ ನಡುವೆಯೇ ಅಂಗೀಕರಿಸಿದೆ. ಇದರ ಬೆನ್ನಲ್ಲೆ ಮುಖ್ಯಮಂತ್ರಿಯವರು ಬಜೆಟ್ ಮೇಲಿನ ತಮ್ಮ ಲಿಖಿತ ಉತ್ತರವನ್ನು ಸದನದಲ್ಲಿ ಮಂಡಿಸಿದರು. ತಕ್ಷಣವೇ ಸಭಾಪತಿಯವರು ಕಲಾಪವನ್ನು ಮಧ್ಯಾಹ್ನದವರೆಗೆ ಮುಂದೂಡಿದರು.

## ಪ್ರತಿಪಕ್ಷಗಳಿಗೆ ಸಿಎಂ ಟಾಂಗ್



**ಬೆಂಗಳೂರು:** ಬುಧವಾರ ಬೆಳಗ್ಗೆ ಸದನ ಆರಂಭವಾಗುತ್ತಿದ್ದಂತೆ ಕಾಂಗ್ರೆಸ್ ಸದಸ್ಯರು ಬಾವಿಗಿಳಿದು ಧರಣ ಮುಂದುವರಿಸಿದರು. ಗದ್ದಲ, ಧಿಕ್ಕಾರದ ನಡುವೆಯೇ ಯಡಿಯೂರಪ್ಪ ಬಜೆಟ್ ಮೇಲಿನ ಚರ್ಚೆಗೆ ಉತ್ತರ ನೀಡಲಾರಂಭಿಸಿದರು. ಬಜೆಟ್ ಮೇಲಿನ ಚರ್ಚೆಯಲ್ಲಿ ಪ್ರತಿಪಕ್ಷಗಳು, ಆಡಳಿತ ಪಕ್ಷದಿಂದ ಒಟ್ಟು 15 ಮಂದಿ ಪಾಲ್ಗೊಂಡಿದ್ದು ಎಲ್ಲರ ಅಭಿಪ್ರಾಯವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಪ್ರತಿಪಕ್ಷ ನಾಯಕರು ಸಂದರ್ಭದ ಸೂಕ್ಷ್ಮತೆ ಅರಿತು ಸಂವೇದನಾಶೀಲತೆಯಿಂದ ಮಾತನಾಡಿದ್ದರೆ ವಾಸ್ತವದ ಚಿತ್ರಣ ತಿಳಿಯಬಹುದಿತ್ತು. ಸಮೃದ್ಧಿ ಸಂದರ್ಭದಲ್ಲೇ ಸರ್ಕಾರಗಳು ಸಾಲ ಮಾಡಿರುವಾಗ ಸಾಂಕ್ರಾಮಿಕ ಸಂಕಷ್ಟ ಪ್ರವಾಹ ಇತರೆ ಪ್ರಕೃತಿ ವಿಕೋಪ ಪರಿಸ್ಥಿತಿಯಲ್ಲಿ ಸಾಲ ಮಾಡದೆ ಅಭಿವೃದ್ಧಿ ಕಾರ್ಯ ಕೈಗೊಳ್ಳುವುದು ಹೇಗೆ? ಕೋವಿಡ್ ಸೃಷ್ಟಿಸಿದ ಸಂಕಷ್ಟ ನಿವಾರಣೆ ಹಾಗೂ ಅಭಿವೃದ್ಧಿ ಚಕ್ರವನ್ನು ಚಾಲನೆಯಲ್ಲಿಟ್ಟುಕೊಳ್ಳಲು ಸಾಲ ಮಾಡಲಾಗಿದೆ ಎಂದು ಸಿಎಂ ಸಮರ್ಥಿಸಿಕೊಂಡರು.

**ಪ್ರತಿಪಕ್ಷಗಳಿಗೆ ಟಾಂಗ್:** ಆಯವ್ಯಯ ಚರ್ಚೆಯಲ್ಲಿ ಪ್ರತಿಪಕ್ಷಗಳ ಸದಸ್ಯರು ಬದ್ಧತಾ ವೆಚ್ಚ ಕಡಿಮೆ ಮಾಡಬೇಕು ಎಂದು ಒತ್ತಾಯಿಸುವ ಜತೆಗೆ ಎಲ್ಲ ಖಾಲಿ ಹುದ್ದೆ ಭರ್ತಿಗೆ ಆಗ್ರಹಿಸಿದ್ದಾರೆ. ಇದು ಒಂದಕ್ಕೊಂದು ತಾಳೆಯಾಗದ ಅಂಶವಾಗಿದೆ ಎನ್ನುವ ಮೂಲಕ ಯಡಿಯೂರಪ್ಪ ಪ್ರತಿಪಕ್ಷಗಳಿಗೆ ಟಾಂಗ್ ನೀಡಿದರು.

## ಮೇಲ್ಮನೆ ಕಲಾಪ ಮುಂದೂಡಿಕೆ

**ವಿಧಾನ ಪರಿಷತ್ತು:** ಆರು ಜನ ಸಚಿವರು ಕೋರ್ಟ್‌ನಿಂದ ಇಂಜಕ್ಷನ್ ತೆಗೆದುಕೊಂಡಿದ್ದು ಯಾಕೆ? ಆ ಸಿಡಿಯಲ್ಲಿ ಅಂತಹದ್ದೇನಿದೆ? ಇದನ್ನು ಸರ್ಕಾರ ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿ ಪ್ರತಿಪಕ್ಷ ಸದಸ್ಯರು ಪ್ರತಿಭಟನೆ ನಡೆಸಿದ್ದರಿಂದ ಸದನವನ್ನು ಅನಿರ್ದಿಷ್ಟಾವಧಿ ಮುಂದೂಡಲಾಯಿತು.

ಬುಧವಾರ ಮಧ್ಯಾಹ್ನ ಕಲಾಪ ಆರಂಭವಾಗುತ್ತಿದ್ದಂತೆ ಪ್ರತಿಪಕ್ಷ ಸದಸ್ಯರೆಲ್ಲರೂ ಬಾವಿಗಿಳಿದು ಪ್ರತಿಭಟನೆಗೆ ಮುಂದಾದರು. ಈ ವೇಳೆ ಮಾತನಾಡಿದ ಸಿ.ಎಂ. ಇಬ್ರಾಹಿಂ, ಸರ್ಕಾರ ಆರು ಮಂದಿ ಅತಿರಥ ಮಹಾರಥರ ರಕ್ಷಣೆಗೆ ಮುಂದಾಗಿದೆ. ಈ ಆರು ಜನ ಮುಂಬೈಗೆ ಹೋಗಿ ಮಂಚ ಮುರಿದು ಈಗ ಸಿಡಿ ಬಿಡುಗಡೆಗೆ ಅವಕಾಶ ನೀಡದಂತೆ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದಾರೆ. ತಪ್ಪು ಮಾಡದಿದ್ದ ಮೇಲೆ ಏಕೆ ಕೋರ್ಟ್‌ಗೆ ಹೋದರು? ಆ ಸಿಡಿಯಲ್ಲಿ ಅಂತಹ ಯಾವ ವಿಚಾರ ಇದೆ? ಮುಖ್ಯಮಂತ್ರಿಗಳು ಈ ಬಗ್ಗೆ ಉತ್ತರಿಸಬೇಕು. ಸಿಡಿ ಬಗ್ಗೆ ಚರ್ಚಿಸಲು ಅವಕಾಶ ನೀಡಬೇಕು ಎಂದು ಆಗ್ರಹಿಸಿದರು. ಉಳಿದ ಸಚಿವರೂ ಇದಕ್ಕೆ ದನಿಗೂಡಿಸಿ ಪಟ್ಟುಹಿಡಿದರು.

ಸಿ.ಎಂ. ಇಬ್ರಾಹಿಂ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿದ ಬಿಜೆಪಿ ಸದಸ್ಯರಾದ ತೇಜಸ್ವಿನಿ ಮತ್ತು ಭಾರತಿ ಶೆಟ್ಟಿ ಸಭಾತ್ಯಾಗ ಮಾಡಿದರು. ಇದಕ್ಕೂ ಮುನ್ನ ಮಾತನಾಡಿದ ತೇಜಸ್ವಿನಿ, 'ಗಂಭೀರ ವಿಚಾರದ ಬಗ್ಗೆ ಪ್ರತಿಪಕ್ಷದ ಸದಸ್ಯರು ಚರ್ಚೆಗೆ ಮುಂದಾಗಿರುವುದು ಸ್ವಾಗತಾರ್ಹ. ಆದರೆ, ಈ ಸದನದಲ್ಲಿ ಮೂರು ಮಂದಿ ಮಹಿಳೆಯರು ಇದ್ದೇವೆ. ಒಂದು ವೇಳೆ ಚರ್ಚೆ ಮಾಡುವುದಾದರೆ, ಕಾಂಗ್ರೆಸ್ ಸದಸ್ಯರ ಪತ್ನಿ, ಮಕ್ಕಳು ಸೇರಿ ಕುಟುಂಬದವರೆಲ್ಲರನ್ನೂ ಕರೆತಂದು ಗ್ಯಾಲರಿಯಲ್ಲಿ ಕುಳಿತುಕೊಳ್ಳಲಿ. ಆಗ ನಾವು ಈ ಬಗ್ಗೆ ಚರ್ಚೆ ಮಾಡುತ್ತೇವೆ. ಕಾಂಗ್ರೆಸ್ ಸದಸ್ಯರು ತಾಕತ್ತಿದ್ದರೆ, ತಮ್ಮ ಕುಟುಂಬಸ್ಥರನ್ನು ಸದನದಲ್ಲಿ ತಂದು ಕೂರಿಸಲಿ. ಏಕೆಂದರೆ, ಅವರಿಗೂ ಇಲ್ಲಿ ಯಾರು ಶ್ರೀರಾಮಚಂದ್ರ ಇಲ್ಲ ಎಂಬುದು ಗೊತ್ತಾಗಲಿ' ಎಂದು ಹೇಳಿದರು. ಭಾರತಿ ಶೆಟ್ಟಿ ಮಾತನಾಡಿ, 'ನಾಲಿಗೆ ಇದೆ ಎಂದು ಬೇಕಾಬಿಟ್ಟಿ ಹರಿಬಿಡುವುದು ಸರಿ ಅಲ್ಲ. ಮಹಿಳಾ ಸದಸ್ಯರೂ ಸದನದಲ್ಲಿದ್ದಾರೆ. ಪ್ರತಿಪಕ್ಷದ ಸದಸ್ಯರ ಮಾತುಗಳಿಂದ ನನಗೆ ಮುಜುಗರ ಆಗುತ್ತಿದೆ. ನಾನು ಸಭಾತ್ಯಾಗ ಮಾಡುತ್ತೇನೆ' ಎಂದು ಹೊರನಡೆದರು.

ಇದಕ್ಕೆ ತಿರುಗೇಟು ನೀಡಿದ ಸಿ.ಎಂ.ಇಬ್ರಾಹಿಂ, 'ಮುಜುಗರಕ್ಕೀಡು ಮಾಡುವ ಸಚಿವರನ್ನು ಯಾಕೆ ನಿಮ್ಮ ಪಕ್ಷದಲ್ಲಿ ಇಟ್ಟುಕೊಂಡಿದ್ದೀರಿ?' ಅದೇನೇ ಇರಲಿ, ಸಿಡಿಯಲ್ಲಿ ಏನಾದರೂ ರಾಷ್ಟ್ರವಿರೋಧಿ ಅಥವಾ ಮಾನವ ವಿರೋಧಿ ಅಂಶಗಳಿವೆಯೇ? ಈ ಆರು ಜನ ಸಚಿವರು ಮುಂಬೈಗೆ ಹೋಗಿದ್ದ ಪ್ಯಾಕೇಜ್ ಮಾಹಿತಿ ಇದೆಯೇ? ಈ ವಿಚಾರ ರಾಜ್ಯದ ಜನತೆಗೆ ಗೊತ್ತಾಗಬೇಕು ಎಂದು ಆಗ್ರಹಿಸಿದರು. ಆಗ, ಬಿಜೆಪಿ ಸದಸ್ಯರು, ಮೇಟಿ ಸಿಡಿ ಪ್ರಕರಣದ ಬಗ್ಗೆ ಪ್ರಸ್ತಾಪಿಸಿದರು. ಈ ವೇಳೆ ವಾಗ್ವಾದ ಉಂಟಾಗಿ ಗದ್ದಲ ಸೃಷ್ಟಿಯಾಯಿತು. ಕೊನೆಗೆ ಸಭಾಪತಿ ಬಸವರಾಜ ಹೊರಟ್ಟಿ ಸದನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದರು.